# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 855
2) ವಿಧಾನ ಪರಿಷತ್ ಸದಸ್ಯರ ಹೆಸರು : ಶ್ರೀ ಎಸ್.ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು)
3) ಉತ್ತರಿಸಬೇಕಾದ ದಿನಾಂಕ : 18/12/2018
4) ಉತ್ತರಿಸುವ ಸಚಿವರು : ಮಾನ್ಯ ಸಣ್ಣ ನೀರಾವರಿ ಸಚಿವರು

| ಕ್ರಮ ಸಂಖ್ಯೆ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಕೊಳ್ಳೇಗಾಲ ತಾಲ್ಲೂಕು ಯರ್ರಂಬಾಡಿ – ಮಿಣ್ಯತ್ತಹಳ್ಳಿ ಜಲಾಶಯವು ಸೂಕ್ತ ನಿರ್ವಹಣೆ ಇಲ್ಲದೆ ಗಿಡಗಂಟೆಗಳು ಬೆಳೆದು ನಿಂತು ಅನೈತಿಕ ಚಟುವಟಿಕೆಗಳ ತಾಣವಾಗಿರುವುದು ಗಮನಕ್ಕೆ ಬಂದಿದೆಯೇ; | ಸದರಿ ಕೆರೆಯನ್ನು ಮಿಣ್ಯತ್ತಹಳ್ಳಕ್ಕೆ ಹೂಗ್ಯಂ ಗ್ರಾಮದ ಬಳಿ 1984-85ರಲ್ಲಿ ನಿರ್ಮಿಸಲಾಗಿದೆ. ಸದರಿ ಕೆರೆಯ ನಿರ್ವಹಣೆಯನ್ನು ಲಭ್ಯವಾಗುವ ಅನುದಾನಕ್ಕೆ ತಕ್ಕಂತೆ ನಿರ್ವಹಣೆ ಮಾಡಲಾಗುತ್ತಿದೆ. 2014-15 ಮತ್ತು 2015-16ರಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಅನೈತಿಕ ಚಟುವಟಿಕೆಗಳ ಬಗ್ಗೆ ಇದುವರೆವಿಗೂ ಯಾವುದೇ ದೂರುಗಳು ಬಂದಿರುವುದಿಲ್ಲ. |
| ಆ) | ಜಲಾಶಯದ ಪ್ರದೇಶವನ್ನು ಸಮರ್ಪಕವಾಗಿ ನಿರ್ವಹಿಸಿ, ಅಭಿವೃದ್ಧಿಪಡಿಸಿ, ಕಾವಲುಗಾರರ ವ್ಯವಸ್ಥೆ ಮಾಡಿ, ಪ್ರವಾಸಿಗರಿಗೆ ಅನುಕೂಲ ಮಾಡಿಕೊಡಲು ಕ್ರಮ ಜರುಗಿಸಲಾಗುವುದೇ; | ಪ್ರಸ್ತುತ, ಈ ಸಂಬಂಧ ಯಾವುದೇ ಪ್ರಸ್ತಾವನೆ ಇರುವುದಿಲ್ಲ. ಆದರೆ, ಸಾರ್ವಜನಿಕರ ಹಿತದೃಷ್ಟಿಯಿಂದ ಪ್ರಸ್ತಾವನೆ ಸ್ವೀಕೃತವಾದರೆ ಪರಿಶೀಲಿಸಲಾಗುವುದು. |
| ಇ) | ಈ ಜಲಾಶಯ ಪ್ರದೇಶವನ್ನು ಪ್ರವಾಸಿ ತಾಣವನ್ನಾಗಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದೇ? | |

ಸಂಖ್ಯೆ: ಸನೀಇ 103 ವಿಪವಿ 2018

(ಸಿ.ಎಸ್.ಪುಟ್ಟರಾಜು)
ಸಣ್ಣ ನೀರಾವರಿ ಸಚಿವರು.